(ಇಂದು ದಿನಾಂಕಃ 08-02-2024 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು)

**ಪಾಟೀ ಸವಾಲುಃ ಪ್ರತಿವಾದಿ ವಕೀಲರಿಂದ ಶ್ರೀ. ಎನ .ಸಿ .ಎಚಃ**

1. ನಾನು ವ್ಯಾಪಾರ ಮತ್ತು ವ್ಯವಸಾಯ ಮಾಡುತ್ತೇನೆ. ನಾನು ಬ್ಯುಟಿ ಪಾರ್ಲರ ನಡೆಸುತ್ತೇನೆ. ನಾನು ಆದಾಯ ತೆರಿಗೆ ಪಾವತಿದಾರಳು ಆಗಿರುತ್ತೇನೆ. ನನ್ನ ಆದಾಯ ತೆರಿಗೆ ವಿವರಗಳನ್ನು ನ್ಯಾಯಾಲಯಕ್ಕೆ ಸಲ್ಲಿಸಿಲ್ಲ. ಈ ದಾವೆಯನ್ನು ನಾನು ಸರ್ವೆ ನಂಬರ 21/1 3 ಎಕರೆ 17 ಗುಂಟೆ ಮತ್ತು ಸರ್ವೆ ನಂಬರ 21/2 3 ಗುಂಟೆ, ಸರ್ವೆ ನಂಬರ 21/3 3 ಗುಂಟೆ ಸಲ್ಲಿಸಿದ್ದು ಆದರೆ ಅದರಲ್ಲಿ 1 ಎಕರೆ 17 ಗುಂಟೆ ಜಮೀನು ಜಾಸ್ತಿ ಇದ್ದುದ್ದರಿಂದ 8 ಎಕರೆ ಜಮೀನಿಗೆ ಸಂಬಂಧ ಪಟ್ಟಂತೆ ಈ ದಾವೆಯನ್ನು ಸಲ್ಲಿಸಿರುತ್ತೇನೆ. ನನ್ನ ಕರಾರು ಪತ್ರದಲ್ಲಿ ಇರುವ ವಿಸ್ತೀರ್ಣದ ಕಡಿಮೆ ಜಮೀನನ್ನು ಕೋರಿ ಈ ದಾವೆ ಸಲ್ಲಿಸಿರುತ್ತೇನೆ ಎಂದರೆ ಸರಿ. ಮೂರು ಸರ್ವೆ ನಂಬರಗಳ ಜಮೀನುಗಳ ಪ್ರತ್ಯೇಕ ಚಕ್ಕು ಬಂದಿ ನನಗೆ ಗೊತ್ತಿಲ್ಲ. ಸಾಕ್ಷಿ ಮುಂದುವರೆದು ಮೂರು ಸರ್ವೆ ನಂಬರ ಗಳ ಜಮೀನಿನ ಚಕ್ಕು ಬಂದಿ ಒಂದೇ ಇರುತ್ತದೆ ಎಂದು ಹೇಳುತ್ತಾರೆ. ಮೂರು ಸರ್ವೆ ನಂಬರ ಜಮೀನುಗಳ ಉತ್ತರಕ್ಕೆ ಖಾಜಾ ಸಾಬ, ದಕ್ಷಿಣಕ್ಕೆ ಕೆರೆ, ಪಶ್ಚಿಮಕ್ಕೆ ಗುಡ್ಡ, ಪೂರ್ವಕ್ಕೆ ಮಹಾನಂದ ನರಸಪ್ಪರವರ ಜಮೀನು ಇರುತ್ತದೆ ಎಂದು ಹೇಳುತ್ತಾರೆ. ಮೂರು ಸರ್ವೆ ನಂಬರ ಜಮೀನುಗಳ ಉತ್ತರಕ್ಕೆ ಖಾಜಾ ಸಾಬ, ಪಶ್ಚಿಮಕ್ಕೆ ಗುಡ್ಡ, ಪೂರ್ವಕ್ಕೆ ಮಹಾನಂದ ನರಸಪ್ಪರವರ ಜಮೀನು ಇರುತ್ತದೆ ಎಂದು ತಪ್ಪು ಹೇಳುತ್ತಿದ್ದೇನೆ ಎಂದರೆ ಸಾಕ್ಷಿ ನನಗೆ ಗೊತ್ತಿರುವ ಪ್ರಕಾರ ಇದೆ ರೀತಿ ಇದೆ ಚಕ್ಕು ಬಂದಿ ಇರುತ್ತದೆ ಎಂದು ಹೇಳುತ್ತಾರೆ.

2. ನನ್ನ ಗಂಡ ಸಾಯಿಕುಮಾರರವರು ಲೇವಾದೇವಿ ಫೈನಾನ್ಸ ವ್ಯವಹಾರ ಮಾಡುತ್ತಾರೆ ಎಂದರೆ ಸರಿಯಲ್ಲ. ಕ್ರಯ ಪತ್ರ ಮಾತುಕತೆಯು ನಮ್ಮ ಮನೆ ಕರ್ಲಬುರಗಿದಲ್ಲಿ ಹಬೀಬ ಪಟೇಲ ಸಮಕ್ಷಮದಲ್ಲಿ ಆಗಿದೆ. ಮಾತುಕತೆ ಸಮಯದಲ್ಲಿ ಹಬೀಬ ಪಟೇಲರವರನ್ನು ಹೊರತುಪಡಿಸಿ ಬೇರೆ ಯಾರು ಇರಲಿಲ್ಲ. ಸಾಕ್ಷಿ ಮುಂದುವರೆದು ಮಾತು ಕತೆ ಸಮಯದಲ್ಲಿ ಹಬೀಬ ಪಟೇಲರವರ ಹೆಂಡತಿ ಫೋನಿನಲ್ಲಿ ಮಾತನಾಡಿದ್ದರು ಎಂದು ಹೇಳುತ್ತಾರೆ. ಫೋನಿನಲ್ಲಿ ಹಬೀಬ ಪಟೇಲರವರ ಹೆಂಡತಿಯ ಜೊತೆ ನಾನು ಮಾತನಾಡಿರಲಿಲ್ಲ ಹಬೀಬ ಪಟೇಲರವರೆ ಮಾತನಾಡಿರುತ್ತಾರೆ ಎಂದು ಹೇಳುತ್ತಾರೆ. ಹಬೀಬ ಪಟೇರವರಿಗೆ ಒಬ್ಬ ಮಗ ಮತ್ತು ಒಬ್ಬ ಮಗಳು ಇರುತ್ತಾರೆ. ಹಬೀಬ ಪಟೇಲರವರ ಹೆಂಡತಿ ಬದುಕಿದ್ದಾಳೆ. ಕ್ರಯದ ಕರಾರು ಪತ್ರಕ್ಕೆ ಹಬೀಬ ಪಟೇಲರವರ ಹೆಂಡತಿ ಮಕ್ಕಳ ಸಹಿ ಪಡೆದಿರುತ್ತಾರೊ ಇಲ್ಲವೊ ನನಗೆ ಗೊತ್ತಿಲ್ಲ. ಹಬೀಬ ಪಟೇಲರವರ ಹೆಂಡತಿ ಮತ್ತು ಮಕ್ಕಳು ನಮ್ಮ ಮನೆಗೆ ಬಂದು ನನ್ನ ಗಂಡನ ಸಮಕ್ಷಮದಲ್ಲಿ ನಮ್ಮ ಜೊತೆ ಮಾತನಾಡಿರುತ್ತಾರೆ. ಈ ರೀತಿ ಮಾತುಕತೆಯಾಗಿದೆ ಎಂದು ನಾನು ನಮ್ಮ ವಕೀಲರಿಗೆ ಮಾಹಿತಿ ಕೊಟ್ಟಿರುವುದಿಲ್ಲ ಮತ್ತು ಬರೆಸಿರುವುದಿಲ್ಲ. ನಾನು ಸಲ್ಲಿಸಿರುವ ನಿ.ಪಿ-1 ನ್ನು ಹಬೀಬ ಪಟೇಲರವರ ಹೆಂಡತಿ ಮಕ್ಕಳಿಗೆ ಓದಿ ಹೇಳಿರುತ್ತೀರಾ ಎಂದರೆ ಸಾಕ್ಷಿ ನನ್ನ ಗಂಡ ನನ್ನ ಜೊತೆ ಇದ್ದರು ಹಬೀಬ ಪಟೇಲರವರು, ಸಬರೇಜಿಸ್ಟರ ಕಛೇರಿಯಲ್ಲಿ ಟೈಪ ಮಾಡಿಸುವಾಗ ಬರೆಯುವುದನ್ನು ಓದಿ ಹೇಳಿದ್ದರು ಆಗ ಎಲ್ಲರ ಸಮುಖದಲ್ಲಿ ಆಗಿದೆ ಎಂದು ಹೇಳುತ್ತಾರೆ. ಈ ಕ್ರಯದ ಕರಾರು ಪತ್ರ ಏಕೆ ಬರೆದುಕೊಳ್ಳುತ್ತಿದ್ದಾರೆ ಎಂದು ನಾನು ಹಬೀಬ ಪಟೇಲರವರ ಮಕ್ಕಳಿಗೆ ಹೇಳಿರುತ್ತೇನೆ. ನಾನು ಸಲ್ಲಿಸಿರುವ ನಿ.ಪಿ-1 ರಲ್ಲಿ 30 ಸಾವಿರ ಬಾಕಿ ಉಳಿದಿದೆ ಎಂದು ಬರೆದಿದ್ದು ಅದೇ ದಿನ ಉಳಿದ 30 ಸಾವಿರ ಕೊಟ್ಟು ಏಕೆ ಖರೀದಿ ಪತ್ರ ಮಾಡಿಸಿಕೊಳ್ಳಲಿಲ್ಲ ಎಂದರೆ ಸಾಕ್ಷಿಯು ಫಾರಂ ನಂಬರ 10, ಮ್ಯಾಪ ಮತ್ತು ದಾಖಲೆಗಳು -

ಬೇಕಾದ್ದರಿಂದ ಅದೇ ದಿನ ಖರೀದಿ ಪತ್ರ ಮಾಡಿಸಿಕೊಳ್ಳಲಿಲ್ಲ ಎಂದು ಹೇಳುತ್ತಾರೆ. ಫಾರಂ ನಂಬರ 10, ಮ್ಯಾಪನ್ನು ಪಡೆಯಲು ನಾನು ಪ್ರಯತ್ನ ಮಾಡಿರುತ್ತೇನೆ. ರೂ.8 ಲಕ್ಷ ಹಣವನ್ನು ಯ್ಯಾಕ್ಸಿಸ ಬ್ಯಾಂಕ ಮೂಲಕ ಒಂದು ಚಕ್ಕನ್ನು ಕೊಟ್ಟಿರುತ್ತೇನೆ. ಆ ಚಕ್ಕನ್ನು ನ್ಯಾಯಾಲಯಕ್ಕೆ ಸಲ್ಲಿಸಿಲ್ಲ. ಆ ಚಕ್ಕಿನ ಬ್ಯಾಂಕ ಖಾತೆಯ ವಿವರವನ್ನು ನ್ಯಾಯಾಲಯಕ್ಕೆ ಸಲ್ಲಿಸಿಲ್ಲ. ಕ್ರಯದ ಕರಾರು ಪತ್ರದಲ್ಲಿ ಕ್ರಯ ಪತ್ರವನ್ನು 3 ವರ್ಷದ ಒಳಗೆ ಮಾಡಿಕೊಡಬೇಕು ಎಂದು ಬರೆದಿದೆ, ನಾನು 3 ವರ್ಷ ಏಕೆ ಕಾಯಲಿಲ್ಲ ಎಂದರೆ ಸಾಕ್ಷಿಯು ಊರಿನ ಜನರು ನನಗೆ ಫೋನ ಮಾಡಿ ಹೊಲವನ್ನು ಮಾರಾಟ ಮಾಡಲು ಪ್ರಯತ್ನ ಮಾಡುತ್ತಿದ್ದಾರೆ ಆಂದ್ರದಿಂದ ಜನರು ಹೊಲವನ್ನು ನೋಡಲು ಬರುತ್ತಿದ್ದಾರೆ ಎಂದು ಹೇಳಿದ್ದರಿಂದ ನಾನು ಮುಂದಿನ ಕ್ರಮ ತೆಗೆದುಕೊಂಡಿರುತ್ತೇನೆ. ನಾನು ಅವರಿಗೆ ನೋಟಿಸ ಕಳುಹಿಸಿದ್ದು, ಆ ನೋಟಿಸ್ಸ ವಾಪಸ್ಸ ಬಂದಿದೆ. ಅದು ಅವರಿಗೆ ತಲುಪಿರುವುದಿಲ್ಲ ವಾಪಸ್ಸ ಬಂದಿದೆ. ಅವರು ಕೊಟ್ಟ ರುಸ್ತಮ ಪುರ ವಿಳಾಸಕ್ಕೆ ನೋಟಿಸ್ಸ ಕಳುಹಿಸಿದ್ದು, ಅದು ವಾಪಸ್ಸ ಬಂದಿರುತ್ತದೆ. ಪ್ರತಿವಾದಿಯರು ಗುಲ್ಬರ್ಗಾದಲ್ಲಿ ಇರುತ್ತಾರೆ, ರುಸ್ತಮಪುರದ ವಿಳಾಸಕ್ಕೆ ಏಕೆ ಕಳುಹಿಸಿರುತ್ತೀರಾ ಎಂದರೆ ಸಾಕ್ಷಿ ಅವರು ಕೊಟ್ಟ ವಿಳಾಸಕ್ಕೆ ನೋಟಿಸ್ಸ ಕಳುಹಿಸಿದ್ದು ಅವರು ತೆಗೆದುಕೊಳ್ಳದೆ ವಾಪಸ್ಸ ಕಳುಹಿಸಿರುತ್ತಾರೆ ಎಂದು ಹೇಳುತ್ತಾರೆ. ಸದರಿ ನಾನು ಕಳುಹಿಸಿರುವ ನೋಟಿಸ್ಸು ವಿಳಾಸದಲ್ಲಿ ಇಲ್ಲ ಎಂದು ವಾಪಸ ಬಂದಿದೆ ಎಂದರೆ ಸಾಕ್ಷಿ ಅವರು ಕೊಟ್ಟ ವಿಳಾಸಕ್ಕೆ ನೋಟಿಸ್ಸ ಕಳುಹಿಸಿದ್ದು ಅವರು ತೆಗೆದುಕೊಳ್ಳದೆ ವಾಪಸ್ಸ ಕಳುಹಿಸಿರುತ್ತಾರೆ ಎಂದು ಹೇಳುತ್ತಾರೆ.

3. ನನ್ನ ಹಾಗೂ ಹಬೀಬ ಪಟೇಲರವರ ನಡುವೆ ದಾವಾ ಆಸ್ತಿಯ ಕುರಿತು ಯಾವುದೇ ಮಾತುಕತೆ ಆಗಿರಲಿಲ್ಲ ಎಂದರೆ ಸರಿಯಲ್ಲ. ಆಗ ಮಾರ್ಟಗೇಜ ಆಗುತ್ತಿರಲಿಲ್ಲ, ಆದ್ದರಿಂದ ಅವರಿಗೆ ತಿಳಿಸದೆ ಕ್ರಯದ ಕರಾರು ಪತ್ರ ಮಾಡಿಕೊಂಡಿರುತ್ತೇನೆ ಎಂದರೆ ಸರಿ. ಪ್ರತಿವಾದಿಯು ತುರ್ತು

ಅವಶ್ಯಕತೆಗಾಗಿ ನನ್ನ ಗಂಡನಿಂದ ರೂ. 3 ಲಕ್ಷ ಹಣವನ್ನು ಸಾಲವಾಗಿ ಪಡೆದಿದ್ದು ಅದಕ್ಕೆ ಒಂದು ವರ್ಷದ ಬಡ್ಡಿ ಹಣ ಕೊಟ್ಟಿದ್ದರು ಸಹ ಅವಧಿಯ ಮುಂಚಿತವಾಗಿ ನಾನು ಈ ಸುಳ್ಳು ದಾವೆ ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ.

4. ದಾವಾ ಆಸ್ತಿಯ ಹಬೀಬ ಪಟೇಲರವರ ಹಿರಿಯರ ಆಸ್ತಿ ಎಂದರೆ ನನಗೆ ಗೊತ್ತಿಲ್ಲ. ದಾವಾ ಆಸ್ತಿಗಳನ್ನು ಹೊರತುಪಡಿಸಿ ಪ್ರತಿವಾದಿಗೆ ಬೇರೆ ಆಸ್ತಿಗಳಿಲ್ಲ ಎಂದರೆ ಸರಿಯಲ್ಲ. ದಾವಾ ಆಸ್ತಿಯು ಪ್ರತಿವಾದಿಯ ಜಂಟಿ ಕುಟುಂಬಂದ ಆಸ್ತಿ ಎಂದರೆ ನನಗೆ ಗೊತ್ತಿಲ್ಲ. ಒಂದು ವೇಳೆ ಮಾರಾಟಕ್ಕೆ ತೆಗೆದುಕೊಳ್ಳಬೇಕಾದರೆ ಹಬೀಬ ಪಟೇಲರವರ ಸಮ್ಮತಿಯಿಂದ ಪಡೆಯ ಬೇಕಾಗುತ್ತದೆ ಎಂದರೆ ಸರಿಯಲ್ಲ. ಹಬೀಬ ಪಟೇಲರವರ ಹೆಂಡತಿ ಮಕ್ಕಳನ್ನು ಕರೆದುಕೊಂಡು ಬನ್ನಿ ಎಂದು ನಾನು ಹೇಳಿದ್ದೆ. ಇದು ಹಣದ ವ್ಯವಹಾರ ಆಗಿದ್ದರಿಂದ ಹಬೀಬ ಪಟೇಲರವರ ಹೆಂಡತಿ ಮಕ್ಕಳನ್ನು ಕರೆದುಕೊಂಡು ಬನ್ನಿ ಎಂದು ಹೇಳುವ ಪ್ರಶ್ನೇ ಬರುವುದಿಲ್ಲ ಎಂದರೆ ಸರಿಯಲ್ಲ. ನಾನು ಸುಳ್ಳು ದಾವೆ ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ.

5. 2019 ರಲ್ಲಿ ದಾವಾ ಆಸ್ತಿಯ ಮಾರುಕಟ್ಟೆ ಬೆಲೆ ಪ್ರತಿ ಎಕ್ಕರೆಗೆ 50 ಸಾವಿರ ಇರಬಹುದು. 2019 ರಲ್ಲಿ ದಾವಾ ಆಸ್ತಿಯ ಮಾರುಕಟ್ಟೆ ಬೆಲೆ ಪ್ರತಿ ಎಕರೆಗೆ 10 ಲಕ್ಷ ಇತ್ತು ಎಂದರೆ ಸರಿಯಲ್ಲ. ದಾವಾ ಆಸ್ತಿಯ ಮಾರುಕಟ್ಟೆ ಬೆಲೆ ಪ್ರತಿ ಎಕರೆಗೆ 10 ಲಕ್ಷ ಇತ್ತು ಇದ್ದುದ್ದರಿಂದ ಒಟ್ಟು ಜಮೀನನ್ನು ರೂ. 8,30,000/-ಕ್ಕೆ ಮಾರಾಟ ಮಾಡುವ ಪ್ರಶ್ನೆಯೆ ಬರುವುದಿಲ್ಲ ಎಂದು ಹೇಳುತ್ತಾರೆ. 2019 ರಲ್ಲಿ ದಾವಾ ಆಸ್ತಿಯ ಮಾರುಕಟ್ಟೆ ಬೆಲೆ ಪ್ರತಿ ಎಕ್ಕರೆಗೆ 50 ಸಾವಿರ ಇತ್ತು ಎಂದು ತೋರಿಸಲು ಸಂಬಂಧಪಟ್ಟ ಕಛೇರಿಯಿಂದ ದಾಖಲೆಯನ್ನು ನ್ಯಾಯಾಲಯಕ್ಕೆ ಸಲ್ಲಿಸಿಲ್ಲ. ನಾವು ಯಾವುದೇ ಚಕ್ಕು ಕೊಟ್ಟಿಲ್ಲ ಎಂದರೆ ಸರಿಯಲ್ಲ. ಪ್ರತಿವಾದಿ ಸಾಲ ವಾಗಿ ಪಡೆದ ರೂ. 3,00,000/-ಹಣವನ್ನು ವಾಪಸ್ಸು

ಕೊಡಲು ತಯ್ಯಾರಿದ್ದಾರೆ ಎಂದರೆ ಸಾಕ್ಷಿ ನಾನು ಭೂಮಿ ಖರೀದಿಸಲು ಹಣ ಕೊಟ್ಟಿದ್ದೆ ಹಣ ವಾಪಸ್ಸು ಪಡೆಯುವ ಪ್ರಶ್ನೆ ಬರುವುದಿಲ್ಲ ಎಂದು ಹೇಳುತ್ತಾರೆ. ನನ್ನ ಮೇಲೆ ಭರವಸೆ ಇರುವುದರಿಂದ ಹಬೀಬ ಪಟೇರವರು ನಾನು ಹೇಳಿದ ದಾಖಲೆಗೆ ಸಹಿ ಮಾಡಿರುತ್ತಾರೆ ಎಂದರೆ ಸರಿ. ಸದರಿ ಸಹಿ ಕ್ರಯದ ಕರಾರು ಪತ್ರ ಮಾಡಿಲ್ಲ, ಸಾಲದ ಹಣಕ್ಕಾಗಿ ಮಾಡಿದ್ದರು ಎಂದರೆ ಸರಿಯಲ್ಲ.

**ಮರು ವಿಚಾರಣೆ ಇರುವುದಿಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನಕ್ಕೆ ಬೆರಳಚ್ಚು ಮಾಡಿಸಲಾಯಿತು)

ಓ.ಹೇ.ಕೇ. ಸರಿ ಇದೆ

ಹಿರಿಯ ಸಿವಿಲ್ ನ್ಯಾಯಾಧೀಶರು,
ಮತ್ತು ಜೆ.ಎಮ್. ಎಫ್. ಸಿ, ಚಿಂಚೋಳಿ.